# ಮಂಡ್ಯ ವಿಶ್ವವಿದ್ಯಾಲಯ

ಎಂ.ಸಿ ರೋಡ್, ಮಂಡ್ಯ – ೫೭೧೪೦೧

# MANDYA UNIVERSITY

M.C Road, Mandya – 571401

Ph.No.: 08232-220039, E-Mail: registrar@mandyauniversity.ac.in, Website: www.mandyauniversity.ac.in


ಸಂಖ್ಯೆ:ಮ.ವಿ.ಮ/ಆಡಳಿತ/ಸ್ಥ.ವಿ.ಸ/108 /2024–25

ದಿನಾಂಕ:16.11.2024

ಇವರಿಗೆ,

ಮಂಡ್ಯ ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡಿರುವ
ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಮಾನ್ಯರೇ,

**ವಿಷಯ:** 2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಮುಂದುವರಿಸಲು ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಆದೇಶದ ಸಂಖ್ಯೆ ಇಡಿ 212 ಯುಎನ್‌ಇ 2023, ಬೆಂಗಳೂರು, ದಿನಾಂಕ: 04.10.2024

***********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2025–26ನೇ ಶೈಕ್ಷಣಿಕ ಸಾಲಿಗೆ ಮಂಡ್ಯ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಗೆ ಸಂಯೋಜನೆ ಮುಂದುವರೆಸಲು ದಿನಾಂಕ: 01.12.2024 ನಂತರ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ನೀಡಿ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸುತ್ತದೆ. ಕಾಲೇಜುಗಳಿಗೆ ಭೇಟಿ ನೀಡುವ ದಿನಾಂಕವನ್ನು ತಮಗೆ ತಿಳಿಸಲಾಗುವುದು.

**ಆದ್ದರಿಂದ ಈ ಕಳಕಂಡ ಅಂಶಗಳನ್ನು ಪಿ.ಪಿ.ಟಿ ಮೂಲಕ ಪ್ರಸ್ತುತ ಪಡಿಸುವುದು,**

1. ಕಾಲೇಜಿನ ವಿವರ: ಸ್ಥಾಪನೆಯಾದ ವರ್ಷ ಪ್ರಾಂಶುಪಾಲರ ವಿವರ: ಹೆಸರು ವಿದ್ಯಾರ್ಹತೆ / ಖಾಯಂ / ತಾತ್ಕಾಲಿಕ ಕಾರ್ಯಭಾರಿಯೇ, ಕಾಲೇಜಿನ ಆಡಳಿತ ಮಂಡಳಿ ವಿವರ : ಸದಸ್ಯರ ಪಟ್ಟಿ / ಸಭೆಯ ನಡಾವಳಿ
2. ಕಾಲೇಜಿನಲ್ಲಿ ಹಾಲಿ ಇರುವ ಕೋರ್ಸ್‌ಗಳು ಹಾಗೂ ಪ್ರವೇಶಾತಿ ಸಂಖ್ಯೆ ಶಾಶ್ವತ ಸಂಯೋಜನೆ ಕೋರ್ಸ್‌ಗಳ ವಿವರ / ತಾತ್ಕಾಲಿಕ ಸಂಯೋಜನೆ ಕೋರ್ಸ್‌ಗಳ ವಿವರ: ಕಾಲೇಜಿನ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯನ್ನು ವರ್ಗವಾರು/ ಕೋರ್ಸ್‌ವಾರು ವಿವರ ನೀಡುವುದು.
3. 2025–26ನೇ ಸಾಲಿಗೆ ಕೋರಿರುವ ಹೊಸ ಕೋರ್ಸ್ / ವಿದ್ಯಾರ್ಥಿ ಸಂಖ್ಯೆ ಹೆಚ್ಚಳ ಕೋರಿಕೆ ಇದ್ದಲ್ಲಿ : ಕೋರಿಕೆಗೆ ಸಂಬಂಧಿಸಿದಂತೆ ಸಮರ್ಥನೆ. ಹೊಸ ಮಾನ್ಯತೆ ಸಂಯೋಜನೆ ಕೋರಿಕೆ ಇದ್ದಲ್ಲಿ ಕೋರ್ಸ್‌ಗಳ ಮತ್ತು ಪ್ರವೇಶಾತಿ ಸಂಖ್ಯೆಯ ವಿವರ:
4. ಅರ್ಹ ಅಧ್ಯಾಪಕರ ವಿವರ : ಖಾಯಂ / ತಾತ್ಕಾಲಿಕ ವಿದ್ಯಾರ್ಹತೆ NET/SLET/Ph.D.
5. ಮೂಲಭೂತ ಸೌಕರ್ಯಗಳು:ಕೊಠಡಿಗಳು, ಪ್ರಯೋಗಾಲಯ, ಗ್ರಂಥಾಲಯ, ಆಟದ ಮೈದಾನ, ಶೌಚಾಲಯ
6. ಯು.ಜಿ.ಸಿ. ನಿಯಮಾನುಸಾರ ಕಡ್ಡಾಯ ಸಮಿತಿಗಳ ರಚನೆ ಹಾಗೂ ನಿರ್ವಹಣೆ :
   **ಉದಾ:** ಮಹಿಳಾ ದೌರ್ಜನ್ಯ ಸಮಿತಿ, ರಾಂಗಿಂಗ್ ಸಮಿತಿ, ಸಮಾನ ಅವಕಾಶಗಳ ಘಟಕ, ಆತಂರಿಕ ಗುಣಮಟ್ಟ ಕಾಯ್ದುಕೊಳ್ಳವಿಕೆ ಘಟಕ ಇತ್ಯಾದಿ.

ಮು.ತಿ.ನೋ

ಮಂಡ್ಯ ವಿಶ್ವವಿದ್ಯಾಲಯ
ಎಂ.ಸಿ ರೋಡ್, ಮಂಡ್ಯ – ೫೭೧೪೦೧

MANDYA UNIVERSITY
M.C Road, Mandya – 571401

Ph.No.: 08232-220039, E-Mail: registrar@mandyauniversity.ac.in, Website: www.mandyauniversity.ac.in



7. 2(ಎಫ್) 12(ಬಿ) ಮತ್ತು ನ್ಯಾಕ್ ಮಾನ್ಯತೆ ಪಡೆದಿರುವ ವಿವರ :
8. ಕಾಲೇಜಿನ ಆಡಳಿತ ಮಂಡಳಿಯಲ್ಲಿ ವಿಶ್ವವಿದ್ಯಾಲಯದ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡಿರುವ ಬಗೆ
9. ವಿದ್ಯಾರ್ಥಿ ಪ್ರವೇಶಾತಿ ವಹಿಯ ನಿರ್ವಹಣೆಯ ವಿವರ ಮತ್ತು ಫಲಿತಾಂಶ ವಿವರ:
10. ಬಿ.ಎಡ್. ಕಾಲೇಜಿನವರು ಕಡ್ಡಾಯವಾಗಿ ಪ್ರಸ್ತುತ ವರ್ಷದ NCTE ಆದೇಶವನ್ನು ಒದಗಿಸುವುದು.
11. ಹೊಸ ಕಾಲೇಜುಗಳ ಸ್ಥಾಪನೆ, ಹೊಸ ಕೋರ್ಸು, ಪ್ರವೇಶಾತಿ ಸಂಖ್ಯೆ ಹೆಚ್ಚಳ, ಸ್ಥಳ/ಹೆಸರು ಬದಲಾವಣೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021, ದಿನಾಂಕ 12.02.2021 ಹಾಗೂ 16.06.2021ರ ಆದೇಶದಂತೆ, ಜಮೀನಿನ ವಿಸ್ತೀರ್ಣ ಕನಿಷ್ಠ ಮಿತಿಗಿಂತ ಕಡಿಮೆ ಇರಬಾರದು ಹಾಗೂ ಸದರಿ ಜಮೀನು ಸಂಸ್ಥೆಯ/ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಉಪನೊಂದಾಣಾಧಿಕಾರಿ ಅವರಿಂದ (ಎ) ಕ್ರಯಾಪತ್ರ ಅಥವಾ (ಬಿ) 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಯ ಲೀಸ್‌ಡೀಡ್ ಅಥವಾ (ಸಿ) ಧಾನಪತ್ರವನ್ನು ಪ್ರಸ್ತುತ ಪಡಿಸುವುದು. ಹಾಗೂ ಲೋಕೋಪಯೋಗಿ ಇಲಾಖೆ ಮತ್ತು ಅಗ್ನಿಶಾಮಕ ಠಾಣೆಯಿಂದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವುದು.
12. ಹಿಂದಿನ ಸಮಿತಿ ವಿಧಿಸಿದ್ದ ಷರತ್ತುಗಳಿಗೆ ಅನುಪಾಲನಾ ವರದಿ :

19/11/24

ಕುಲಸಚಿವರು
ಕುಲಸಚಿವರು
ಮಂಡ್ಯ ವಿಶ್ವವಿದ್ಯಾಲಯ
ಮಂಡ್ಯ - 571401.

ಪ್ರತಿಗಳು
1. ಕುಲಪತಿಗಳು/ಕುಲಸಚಿವರ ಆಪ್ತಸಹಾಯಕರುಗಳು, ಮ.ವಿ.ಮ
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮ.ವಿ.ಮ
3. ಕಛೇರಿ ಪ್ರತಿ.